


# ಬೆಂಕಿಯಲ್ಲಿ ಅರಳಿದ ಆಟಗಾರ

**ಕ್ರಿಕೆಟ್ ಅನ್ನು ಧರ್ಮಪ್ರಜ್ಞೆ ಹಾಳುಗೆಡಹುವ ಚಟ ಎಂದು ನಂಬುವ ನೆಲದಲ್ಲಿ ತನ್ನ ಆಟದ ಮೂಲಕವೇ ಅಪಾರ ಅಭಿಮಾನಿಗಳನ್ನು ಸೃಷ್ಟಿಸಿಕೊಂಡ ಸಾಧಕ ರಶೀದ್!**

■ ವಿಶಾಖ ಎನ್.

1996ರಿಂದ 2001ರವರೆಗೆ ಅಫ್ಘನಿಸ್ತಾನದಲ್ಲಿ ತಾಲೀಬಾನ್ ಆಳ್ವಿಕೆ ಇತ್ತಲ್ಲ; ಆ ಸಂದರ್ಭದಲ್ಲಿ ರಶೀದ್ ಖಾನ್ ಹುಟ್ಟಿದ್ದು (1998ರಲ್ಲಿ). ಕ್ರೀಡೆಯನ್ನು ಧರ್ಮಪ್ರಜ್ಞೆ ಹಾಳುಗೆಡಹುವ ಕಾಲಹರಣದ ಚಟ ಎಂದೇ ಅಲ್ಲಿ ನಂಬಿದವರು ಅನೇಕರಿದ್ದರು. ಟಿ.ವಿ.ಯಲ್ಲಿ ಸಚಿನ್ ತೆಂಡೂಲ್ಕರ್ ಬ್ಯಾಟಿಂಗ್ ಹಾಗೂ ಪಾಕಿಸ್ತಾನದ ಶಾಹಿದ್ ಅಫ್ರಿದಿಯ ಆಲ್‌ರೌಂಡ್ ಆಟ ನೋಡಿಯೇ ರಶೀದ್ ಉತ್ಸಾಹ ತಂದುಕೊಂಡಿದ್ದು. ಟೆನಿಸ್ ಬಾಲ್ ಬಳಸಿ ತನ್ನ ಅಣ್ಣ–ತಮ್ಮಂದಿರ ಜೊತೆ ಆಡುತ್ತಿದ್ದ ರಶೀದ್ ದೊಡ್ಡ ಕುಟುಂಬದ ಮಗ. ಹತ್ತು ಅಣ್ಣ–ತಮ್ಮಂದಿರೊಟ್ಟಿಗೆ ಆಟ.

ಇಂಗ್ಲಿಷ್ ಮೇಲೆ ರಶೀದ್ ಅವರಿಗಿರುವ ನಿಯಂತ್ರಣ ಕಂಡಾಗ, 'ಇವನಾರವ ಇವನಾರವ...' ಎನ್ನುವುದನ್ನು ಬಿಟ್ಟುಬಿಡುತ್ತೇವೆ. ಕೈಯಿಂದ ಪಂದ್ಯ ಜಾರಿಯೇಹೋಯಿತು ಎಂದು 'ಗುಜರಾತ್ ಟೈಟನ್ಸ್' ತಂಡದ ಆಟಗಾರರೆಲ್ಲ ಉಗುರು ಕಚ್ಚುವ ಸನ್ನಿವೇಶಕ್ಕೆ ಈ ಸಲದ 'ಐಪಿಎಲ್' ಕ್ರಿಕೆಟ್ ಪಂದ್ಯವೊಂದರಲ್ಲಿ ದೂಡಿಸಿಕೊಂಡಿದ್ದಾಗ, 'ಸನ್‌ರೈಸರ್ಸ್ ಹೈದರಾಬಾದ್' ತಂಡದ ಎದುರು ಕೊನೆಯ ಓವರ್‌ನಲ್ಲಿ ನಾಲ್ಕು ಎಸೆತಗಳ ಪೈಕಿ ಮೂರನ್ನು ಸಿಕ್ಸರ್‌ಗೆ ಎತ್ತಿ ನಗುವನ್ನು ಬೆವರ ಹನಿಗಳಿದ್ದ ಮುಖದ ಮೇಲೆ ಕೂರಿಸಿಕೊಂಡು ಬಂದವರು ರಶೀದ್. ಹಾಗೆ ನೋಡಿದರೆ, ಅವರ ಬ್ಯಾಟ್ಸ್‌ಮನ್‌ಷಿಪ್ ಈಗೀಗ ಮಬ್ಬಾಗಿತ್ತು. ಅಲ್ಲೊಂದು ಇಲ್ಲೊಂದು ಮಿಂಚು ಹೊಡೆಸುವಂಥ ಇನಿಂಗ್ಸ್ ಬರುತ್ತಿತ್ತಷ್ಟೆ. ಈ ಸಲ ತಮ್ಮ ಪೂರ್ವಾಶ್ರಮದ ತಂಡದ ವಿರುದ್ಧವೇ ಅವರು ಆಡಿದ ರೀತಿ ಬೆರಗು ಮೂಡಿಸಿತು. ಮಾರ್ಕೊ ಯೆನ್ಸನ್ ತರಹದ ನಿಯಂತ್ರಣವಿರುವ ವೇಗದ ಬೌಲರ್‌ನ ಕೊನೆಯ ಎಸೆತವನ್ನು ಸಿಕ್ಸರ್‌ಗೆ ಅಟ್ಟಿ, ಪಂದ್ಯವನ್ನು ಒಬ್ಬ ಬೌಲರ್ ಆಲ್‌ರೌಂಡರ್ ಗೆಲ್ಲಿಸಿಕೊಂಡು ಬರುವುದು ವಿರಳಾತಿವಿರಳ.

2017ರಲ್ಲಿ ರಶೀದ್ ಮೊದಲ ಸಲ ಐಪಿಎಲ್ ಆಡಿದ್ದು. ಮರುವರ್ಷವೇ ಅವರು ಸನ್‌ರೈಸರ್ಸ್ ಹೈದರಾಬಾದ್ ಫೈನಲ್‌ವರೆಗೆ ಪ್ರವೇಶಿಸಲು ಶ್ರೇಷ್ಠ ಲೆಗ್ ಸ್ಪಿನ್ ಮೂಲಕ ಕಾಣಿಕೆ ಕೊಟ್ಟರು. ಆ ಋತುವಿನಲ್ಲಿ 21 ವಿಕೆಟ್‌ಗಳನ್ನು ಪಡೆದರು. ಕಿಲಾಡಿ ಬೌಲರ್ ಎಂದೇ ಖ್ಯಾತರಾದ ಅವರು 11 ಎಸೆತಗಳಲ್ಲಿ ಈ ಸಲ 31 ರನ್ ದೋಚಿ, ಪಂದ್ಯವನ್ನು ಕಸಿದುಕೊಂಡು ಬಂದಾಗ ಅವರೊಳಗಿನ ಬ್ಯಾಟ್ಸ್‌ಮನ್ ಮರುಜೀವ ಪಡೆದಿದ್ದ.

ರಶೀದ್ ಬೆಳವಣಿಗೆಯಲ್ಲಿ ಕೆಲವು ಮಾನವೀಯ ಕಥೆಗಳಿವೆ. 'ಶಪಗೀಝ್ ಕ್ರಿಕೆಟ್ ಲೀಗ್' ಎಂದರೆ ಅಫ್ಘನ್ನರ ಪಾಲಿಗೆ ಇಲ್ಲಿನ ಪ್ರೀಮಿಯರ್ ಕ್ರಿಕೆಟ್ ಲೀಗ್ ಇದ್ದಂತೆ. ಅಲ್ಲಿನ ಪಂದ್ಯವೊಂದನ್ನು ಜನರು ಆಸ್ವಾದಿಸುತ್ತಿದ್ದರು. ಬ್ಯಾಂಡ್–ಎ–ಅಮೀರ್ ಡ್ರಾಗನ್ಸ್ ತಂಡಕ್ಕೆ ಗೆಲುವು ತಂದಿತ್ತ ರಶೀದ್ ಖಾನ್ 19ನೇ ವಯಸ್ಸಿಗೇ ಸ್ಟಾರ್ ಕ್ರಿಕೆಟರ್ ಆಗಿಬಿಟ್ಟಿದ್ದರು. ಟಿ–20 ಕ್ರಿಕೆಟ್‌ನಲ್ಲಿ ಚಿಕ್ಕಪ್ರಾಯದಲ್ಲಿಯೇ 100 ವಿಕೆಟ್ ಪಡೆದ ದೇಸಿ ಟೂರ್ನಿಯ ದಿಗ್ಗಜ ಎಂದು ಹೆಸರಾಗಿದ್ದವರು ಅವರು.

ಅದೇ ಟೂರ್ನಿ ನಡೆದ ಸಂದರ್ಭದಲ್ಲಿ ಆತ್ಮಹತ್ಯಾ ಬಾಂಬ್ ಸ್ಫೋಟಿಸಿ ಮೂವರು ಮೃತಪಟ್ಟರು. ಕಾಬೂಲ್ ಕ್ರೀಡಾಂಗಣದಿಂದ ಕೆಲವೇ ಮೀಟರ್ ದೂರದಲ್ಲಿ ಆ ಅವಘಡ ನಡೆದದ್ದು. ಕ್ರೀಡಾಂಗಣದಲ್ಲಿ ಇದ್ದ ರಶೀದ್ ಅಭಿಮಾನಿಗಳು ಅಲ್ಲಿಂದ ಕದಲಿರಲಿಲ್ಲ. ಕೆಲವರು ಬಣ್ಣದಲ್ಲಿ ಮೈಮೇಲೆ ರಶೀದ್ ಚಿತ್ರ ಬಿಡಿಸಿಕೊಂಡು ಬಂದು ಕುಳಿತಿದ್ದರು. ಇನ್ನು ಕೆಲವರು ನೆಚ್ಚಿನ ಆಟಗಾರನ ಕುರಿತು ಹಾಡುತ್ತಾ ಮೈಮರೆತಿದ್ದರು. ಅಫ್ಘನ್ ರಾಷ್ಟ್ರಧ್ವಜವನ್ನು ಗಾಳಿಯಲ್ಲಿ ಆಡಿಸುತ್ತಾ ಬಾಂಬ್ ಸ್ಫೋಟದ ಆತಂಕವನ್ನೂ ಲೆಕ್ಕಿಸದೆ ಆಟದ ಮಜಾ ಕಣ್ತುಂಬಿಕೊಂಡಿದ್ದರು.

ಅಫ್ಘಾನಿಸ್ತಾನದ ಬೇರೆ ಯಾವ ಆಟಗಾರ ಕೂಡ ರಶೀದ್‌ಗೆ ಮೊದಲು ಐಪಿಎಲ್‌ನಲ್ಲಿ ಆಡಿರಲಿಲ್ಲ. ಆಸ್ಟ್ರೇಲಿಯಾದ 'ಬಿಗ್ ಬ್ಯಾಷ್' ಲೀಗ್‌ನಲ್ಲಿ ಅನುಭವ ಕಂಡುಕೊಳ್ಳುವ ಅವಕಾಶ ಕೂಡ ಆ ದೇಶದ ಬೇರೆ ಯಾರಿಗೂ ಸಿಕ್ಕಿರಲಿಲ್ಲ. ಅಡಿಲೇಡ್ ಸ್ಟ್ರೈಕರ್ಸ್ ಪರವಾಗಿ ಆಡುವ ಅವಕಾಶ ಪಡೆದಾಗ ಆ ತಂಡದ ಕೋಚ್ ಆಗಿದ್ದ ಜೇಸನ್ ಗಿಲೆಸ್ಪಿ, 'ಉತ್ಸಾಹ, ಸಾಮರ್ಥ್ಯ ಇದ್ದೂ ತನ್ನನ್ನು ತಾನು ನಿಯಂತ್ರಿಸಿಕೊಳ್ಳಬಲ್ಲ ಜಾಣ ರಶೀದ್' ಎಂದು ಹೊಗಳಿದ್ದರು.

ರಶೀದ್ ತಮ್ಮ ಲೆಗ್ ಸ್ಪಿನ್ ಜಾಣತನದಿಂದಲೇ ಅಫ್ಘಾನಿಸ್ತಾನ ರಾಷ್ಟ್ರೀಯ ತಂಡಕ್ಕೆ 17ರ ಪ್ರಾಯದಲ್ಲೇ ಆಯ್ಕೆಯಾದರು. ವೆಸ್ಟ್ ಇಂಡೀಸ್ ವಿರುದ್ಧ ಬರೀ 18 ರನ್ ನೀಡಿ 8 ವಿಕೆಟ್ ಪಡೆದ ಶ್ರೇಷ್ಠ ಸಾಧನೆಯೂ ಸೇರಿ ಬಲು ಬೇಗ ಪಂದ್ಯವೊಂದಕ್ಕೆ ಸರಾಸರಿ ಎರಡು ವಿಕೆಟ್ ನಂತೆ ಪಡೆಯುತ್ತಾ ಸಾಧನೆ ಮಾಡತೊಡಗಿದರು. ಕೆರೀಬಿಯನ್ ಪ್ರೀಮಿಯರ್ ಲೀಗ್ ಟಿ–20 ಕ್ರಿಕೆಟ್‌ನಲ್ಲಿ ಮೊದಲ ಹ್ಯಾಟ್ರಿಕ್ ಸಾಧನೆ ಮಾಡಿದ ಬೌಲರ್ ಎಂಬ ಗೌರವ ಅವರದ್ದು. ರಾಷ್ಟ್ರೀಯ ತಂಡದ ನಾಯಕನಾಗುವವರೆಗೆ ಅವರು ಬೆಳೆದರು. ಏಕದಿನ ಕ್ರಿಕೆಟ್ ಪಂದ್ಯಗಳಲ್ಲಿ 100 ವಿಕೆಟ್ ಗಡಿಯನ್ನು ಚಿಕ್ಕ ವಯಸ್ಸಿನಲ್ಲಿ ದಾಟಿದವ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಭಾರತದ ಎದುರು ಅಫ್ಘನ್ ತಂಡ ಮೊದಲು ಟೆಸ್ಟ್ ಪಂದ್ಯ ಆಡಿದ ಐತಿಹಾಸಿಕ ಸಂದರ್ಭದಲ್ಲೂ ತಂಡದ ಸದಸ್ಯರಲ್ಲಿ ಒಬ್ಬರಾದರು.

ಯುದ್ಧ ನಡೆದಾಗ ಪಾಕಿಸ್ತಾನದಲ್ಲಿ ಆಡಿಕೊಂಡು ಬೆಳೆದು, ಮರಳಿ ತನ್ನೂರಿನಲ್ಲಿ ಕ್ರಿಕೆಟ್ ಚೆಂಡನ್ನು ತಿರುಗಿಸತೊಡಗಿದ ರಶೀದ್, 'ನನ್ನ ದೇಶಕ್ಕೆ ವಿಶ್ವಕಪ್ ಗೆದ್ದುಕೊಡಬೇಕು. ಅದು ನನ್ನ ಜೀವಮಾನದ ಕನಸು' ಎಂದು ಒಮ್ಮೆ ಹೇಳಿದ್ದರು. ಕನಸು ಇಷ್ಟು ದೊಡ್ಡದಾಗಿ ಇರಬೇಕು. ಅದಕ್ಕೇ ಅವರನ್ನು 15 ಕೋಟಿ ರೂಪಾಯಿ ಕೊಟ್ಟು ಈ ಸಲ ಗುಜರಾತ್ ಟೈಟನ್ಸ್ ತಂಡದ ಒಡೆಯರು ಖರೀದಿಸಿದ್ದು. 10 ಪಂದ್ಯಗಳಲ್ಲಿ 9 ವಿಕೆಟ್‌ಗಳನ್ನು ಕಿತ್ತಿರುವ ಅವರ ಎಕಾನಮಿ 7ಕ್ಕಿಂತ ಕಡಿಮೆ. ಐಪಿಎಲ್‌ನಲ್ಲಿ ಶ್ರೇಷ್ಠ ಎನಿಸಿಕೊಳ್ಳಲು ಇನ್ನೇನು ಬೇಕು?

ಪ್ರತಿಕ್ರಿಯಿಸಿ: feedback@sudha.co.in